**ಇಂದು ದಿನಾಂಕ 25.02.2026 ರಂದು ಡಿಡಬ್ಲ್ಯೂ -1 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

**1.** ದಾವೆ ಬಗ್ಗೆ ಮಾಹಿತಿ ತಿಳಿದುಕೊಂಡಿದ್ದೇನೆ. ವಾದಿಯ ತಂದೆ ದಿನಾಂಕಃ 10.06.1998 ರಲ್ಲಿ ವಾದಿಗೆ ನೋಂದಾಯಿತ ವಿಲ್ ನ್ನು ದಾವಾ ಆಸ್ತಿಗೆ ಮಾಡಿಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ರಾಮಪ್ಪ ನನಗೆ ಗೊತ್ತು. ವಾದಿ ನನಗೆ ಗೊತ್ತಿಲ್ಲ. ರಾಮಪ್ಪ ದಿನಾಂಕಃ 10.06.1998 ರಲ್ಲಿ ವಿಲ್ ಮಾಡಿಕೊಟ್ಟು ದಾವಾ ಆಸ್ತಿಯ ಸ್ವಾಧೀನವನ್ನು ವಾದಿಗೆ ಬಿಟ್ಟು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಯೇ ವಿಲ್‌ನ ಆಧಾರದ ಮೇಲೆ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂ.77/1 ಕ್ಕೆ ಸಂಬಂಧಿಸಿದಂತೆ ಎಲ್ಲಾ ದಾಖಲೆಗಳನ್ನು ಪರಿಶೀಲನೆ ಮಾಡಿದ್ದೇನೆ. 1998 ರಿಂದ ಇ.ಸಿ. ನ್ನು ಹಾಜರು ಮಾಡಿಲ್ಲ ಎಂದರೆ ನೋಡಬೇಕು. ರಾಮಪ್ಪ ಮತ್ತು ಆಂಜಿನಪ್ಪ ರಾಜಿ ಮಾಡಿಕೊಳ್ಳುವ ಮೊದಲೇ ವಾದಿಗೆ ರಾಮಾಪ್ಪ ವಿಲ್ ನ್ನು ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ರಾಜಿ ಪತ್ರವನ್ನು ದಿನಾಂಕಃ 13.10.1998 ರಲ್ಲಿ ನಿಡಿ-4 ರಂತೆ ಸಲ್ಲಿಸಿದ್ದಾರೆ ಎಂದರೆ ನಿಜ. ನಿಡಿ-4 ನ್ನು ಸಲ್ಲಿಸುವ ಮೊದಲೇ ರಾಮಾಪ್ಪ ವಾದಿಗೆ ವಿಲ್ ನ್ನು ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಿಡಿ-4 ನ್ನು ನಾವೇ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಈಗಲೂ ಸಹ ವಾದಿಯೇ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

Sd/-

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**